- 10 -

ಈ ದಿನ ದಿನಾಂಕಃ 04-09-2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಹೆಚ್ ಟಿ ವಕೀಲರಿಂದಃ**

ಮಾನಾಚಾರ್ ಮತ್ತು ಅವರ ಹೆಂಡತಿಯಾದ ಶಾರದಮ್ಮನವರ ಮರಣೋತ್ತರ ಕ್ರಿಯಾಧಿಗಳನ್ನು ಅವರ ಸಂಬಂಧಿಕರು ಮಾಡಿರಬಹುದು. ಸದರಿಯವರ ತಿಥಿಕರ್ಮಗಳನ್ನು ಪ್ರತಿವಾದಿ ಮತ್ತು ಅವರ ಕುಟುಂಬದವರು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿ ಹೇಳಿದಂತೆ ಸದರಿ ಮಾನಾಚಾರ್ ರವರ ಅನುಪಾನುಗಳನ್ನು ನಾವೇ ನೋಡಿಕೊಂಡಿದ್ದು ಮುಂದೆಯೂ ಸಹ ನಾವೇ ನೋಡಿಕೊಳ್ಳುತ್ತೇವ ಎಂಬ ಭರವಸೆ ಮತ್ತು ನಂಬಿಕೆಇರುವುದರಿಂದಲೂ ಎಂದು ಪುಟ ಸಂಖ್ಯೆ 1 ರಲ್ಲಿ ನಮೂದು ಇದ್ದು , ಆ ರೀತ ಆನುಪಾನುಗಳನ್ನು ನೋಡಿಕೊಂಡ ಬಗ್ಗೆ ಮತ್ತು ಸದರಿ ಮಾನಾಚರಾರ್ ಮತ್ತು ಶಾರದಮ್ಮರವರನ್ನು ಆಸ್ಪತ್ರೆಗೆ ತೋರಿಸಿದ ದಾಖಲೆಗಳಾಗಲಿ ಇವೆಯೇ ಎಂದರೆ ಸಾಕ್ಷಿ ಯಾವುದು ದಾಖಲೆಗಳು ಇಲ್ಲ ಎಂದು ನುಡಿಯುತ್ತಾರೆ.

ಸದರಿ ಮಾನಾಚಾರ್ ರವರು ತರೀಕೆರೆಯ ಅಚಾರ್ ಬೀದಿಯಲ್ಲಿ ಮರಣಹೊಂದಿದ್ದು, ಶಾರದಮ್ಮನವರು ಮಾವಿನಕೆರೆ ಗ್ರಾಮ, ಕಳಸದಲ್ಲಿ ಮರಣಹೊಂದಿರುತ್ತಾರೆ ಎಂದರೆ ಸರಿ. ಸದರಿಯವರು ಮೃತಪಡುವ ಕಾಲಕ್ಕೆ ಪ್ರತಿವಾದಿಯೊಂದಿಗೆ ವಾಸವಾಗಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರತ್ಯೇಕವಾಗಿ ವಾಸವಾಗಿದ್ದರು ಎಂದು ನುಡಿಯುತ್ತಾರೆ. ಸದರಿಯರಿಗೆ ಈಗ ಸದರಿ ಮಾನಚಾರ್ ಮತ್ತು ಶಾರದಮ್ಮನವರ ವಿಶ್ವಕರ್ಮ ಸಮಾರಾಧನೆಯ ಅಹ್ವಾನಪತ್ರಿಕೆಗಳನ್ನು ತೋರಿಸಿದ್ದು ಆದನ್ನು ನೋಡಿ ಒಪ್ಪಿ ಗುರುತಿಸಿದ ಮೇರೆಗೆ ಅದನ್ನು **ನಿಡಿ-2 ಮತ್ತು 3** ಎಂದು ಗುರುತಿಸಲಾಯಿತು.

ಸದರಿ ಮಾನಾಚಾರ್ ರವರಿಗೆ ಪ್ರತಿವಾದಿ, ಭಾಗ್ಯಮ್ಮ , ಸುಲೋಚನಮ್ಮ , ಪ್ರೇಮ ಮತ್ತು ಕಮಲಮ್ಮ ಎಂಬ ಮಕ್ಕಳಿದ್ದಾರೆ ಎಂದರೆ ಸರಿ. ಸಾಕ್ಷಿಗೆ ಈಗ ದಿಃ21-12-2023 ರ ವಂಶವೃಕ್ಷದ ದೃಢೀಕರಣ ಪತ್ರದ ದಾಖಲೆಯನ್ನು ತೋರಿಸಿದ್ದು ಆದನ್ನು ಸಾಕ್ಷಿ ನೋಡಿ ಒಪ್ಪಿ ಗುರುತಿಸಿದ ಮೇರೆಗೆ ಅದನ್ನು **ನಿಡಿ-4** ಎಂದು ಗುರುತಿಸಲಾಯಿತು. ನಿಡಿ-4ರಂತೆ ಸದರಿ ಮಾನಾಚಾರ್ ರವರಿಗೆ 4 ಜನ ವಾರಸುದಾರರು ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಸದರಿಯವರನ್ನು ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ಸದರಿ ನಿಡಿ-4 ರಲ್ಲಿರುವ ಮಾನಾಚಾರಿಯವರ ವಾರಸುದಾರರಾದ ಹೆಣ್ಣುಮಕ್ಕಳನ್ನು ಪ್ರಸ್ತುತ ದಾವೆಯಲ್ಲಿ ಪಕ್ಷಗಾರಾರಾಗಿ ಸೇರಿಸಿಲ್ಲ ಎಂದರೆ ಸಾಕ್ಷಿ ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ಹಾಗಾಗಿ ಸದರಿ ಮಾನಾಚಾರ್ ರವರಿಗೆ ಪ್ರತಿವಾದಿಯೊಂದಿಗೆ ನಿಡಿ-4ರಲ್ಲಿ ಕಂಡ ಹೆಣ್ಣುಮಕ್ಕಳು ಸಹ ಹಕ್ಕುದಾರರು ಎಂದರೆ ಸರಿ.

ದಾವಾಸ್ತಿ ಮೂಲತಃ ದರ್ಖಾಸ್ತು ಮೂಲಕ ಮಂಜೂರಾದ ಆಸ್ತಿಯಾಗಿದ್ದು ಸ್ಕೇಚ್ ಆಗುವುದಿಲ್ಲ ಎಂದರೆ ಸಾಕ್ಷಿ ನಾವು ಜಿಲ್ಲಾಧಿಕಾರಿಗಳಿಂದ ಆದೇಶವನ್ನು ಪಡೆದು ಸ್ಕೇಚ್ ನ್ನು ಮಾಡಿಸಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ-1ರ ಸಮಯಕ್ಕೆ ಯಾವುದೇ ಸ್ಕೇಚ್ ಆಗಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ದಾವಾಸ್ತಿ ಮಾನಾಚಾರಿಯ ಸ್ವಯಾರ್ಜಿತ ಆಸ್ತಿಯಾಗಿದ್ದ ಸದರಿಯವರು ನನ್ನ ಮಾವ ಸಾಮ್ಯನಾಯ್ಕರವರ ಸ್ನೆಹಿತರಾಗಿದ್ದರು ಎಂದು ನುಡಿಯುತ್ತಾರೆ. ಮಾನಾಚಾರಿಯವರಿಗೆ 2 ಎಕರೆ 2 ಗುಂಟೆ ಜಮೀನು ಮಂಜೂರಾಗಿದ್ದು ಅದರಲ್ಲಿ 1 ಎಕರೆ 1 ಗುಂಟೆಗೆ ಸಂಬಂಧಿಸಿದಂತೆ ಸರ್ವೆ ಸ್ಕೇಚ್ ಆದ ಕುರಿತು ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿ. ನಿಪಿ-1 ಕ್ಕೆ ಸಂಬಂಧಿಸಿದಂತೆ ಸದರಿ 2 ಎಕರೆ 2 ಗುಂಟೆ ಆಸ್ತಿಯಲ್ಲಿ ಯಾವ ಭಾಗದ ಯಾವ ಆಸ್ತಿಯನ್ನು ವಿಲ್ ಮಾಡಿರುತ್ತಾರೆ ಎಂದು ಯಾವುದೇ ದಾಖಲೆ ಇಲ್ಲ ಎಂದರೆ ಸಾಕ್ಷಿ ಪಣಿ ಇದೆ ಎಂದು ನುಡಿಯುತ್ತಾರೆ.

ನಿಪಿ-1 ನ್ನು ಬರೆಯುವಾಗ ನಾನು ಹಾಜರಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಪತ್ರವನ್ನು ಬರೆಯುವಾಗ ನಾನು ಹಾಜರಿರುತ್ತೇನೆ ಎಂದು

ನುಡಿಯುತ್ತಾರೆ, ನಿಪಿ-1 ನ್ನು ಮಾನಾಚಾರಿ ಮತ್ತು ಶಾರದಮ್ಮನವರು ಚನ್ನಗಿರಿಯ ಉಪನೊಂದಣಾಧಿಕಾರಿಗಳ ಕಚೇರಿಯಿಲ್ಲಿ ಸ್ಟಾಂಪ್ ವೆಂಡರ್ ರವರಿಂದ ಬರೆಸಿರುತ್ತಾರೆ. ಸದರಿ ಬರವಣಿಗೆ ಮದ್ಯಾಹ್ನ 2.30 ಯಿಂದ 4.00 ಗಂಟೆಯ ಒಳಗೆ ಬರೆಸಿಕೊಂಡಿರುತ್ತಾರೆ. ಸದರಿ ದಾಖಲೆಗೆ ಮಾನಾಚಾರಿ ಮತ್ತು ಶಾರದಮ್ಮನವರು ಸಹಿ ಮಾಡಿರುತ್ತಾರೆ. ಸದರಿ ದಾಖಲೆಗೆ ಮುದ್ದೇನಹಳ್ಳಿಯ ವೀರಭದ್ರಪ್ಪ ಮತ್ತು ಗಂಡುಗನಹಂಕಲು ಗ್ರಾಮದ ಅಣ್ಣಪ್ಪನಾಯ್ಕನವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ಸದರಿ ವೀರಭದ್ರಪ್ಪ ನನಗೆ ಪರಿಚಿತ. ಸದರಿಯವರು ಉಪನೊಂದಾಣಾಧಿಕಾರಿಗಳ ಕಚೇರಿಯಲ್ಲಿ ಕೆಲಸ ಮಾಡುತ್ತಾರೆ. ಸದರಿಯವರನ್ನು ನಿಪಿ-1 ಕ್ಕೆ ಸಹಿ ಮಾಡಲು ಮಾನಾಚಾರಿ ಮತ್ತು ಶಾರದಮ್ಮನವರು ಕರೆದಿರುತ್ತಾರೆ. ನಿಪಿ-1 ಕ್ಕೆ ಉಪನೊಂದಾಣಾಧಿಕಾರಿಗಳ ಸಮಕ್ಷಮ ಸದರಿ ಸಾಕ್ಷಿದಾರರು ಸಹಿ ಮಾಡಿರುತ್ತಾರೆ.

ನಿಪಿ-1 ರಲ್ಲಿ ಮಾನಾಚಾರಿ ಮತ್ತು ಶಾರದಮ್ಮನವರಿಗೆ ನಾನು ಯಾವ ರೀತಿ ಸಂಬಂಧ ಎಂದು ನಮೂದು ಇಲ್ಲ ಎಂದರೆ ಸಾಕ್ಷಿ ನನ್ನ ಮಾವನವರಿಗೆ ತುಂಬಾ ಹತ್ತಿರದವರು ಎಂದು ನುಡಿಯುತ್ತಾರೆ. ಸದರಿ ಸಂಗತಿ ನಿಪಿ-1 ರಲ್ಲಿ ನಮೂದು ಇಲ್ಲ ಎಂದರೆ ಸರಿ. ನಿಪಿ-1ನ್ನು ಬರೆದುಕೊಡುವ 5 ವರ್ಷಕ್ಕೂ ಪೂರ್ವವೇ ನನ್ನ ಮಾವ ಮೃತಪಟ್ಟಿದ್ದರು. ಸದರಿ ನನ್ನಮಾವ ಮಾನಾಚಾರ್ ರವರಿಗೆ ಯಾವುದೇ ಪರಿಚಯವಿಲದೆ ಇದ್ದರು ಸಹ ಮತ್ತು ಸದರಿ ಮಾನಾಚಾರ್ ರವರು ನಿಪಿ-1 ನ್ನು ಬರೆದುಕೊಡದೇ ಇದ್ದರು ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ನಿಪಿ-1 ರ ಬರವಣಿಗೆಗೆ ಖರ್ಚನ್ನು ಮಾನಾಚಾರಿಯವರೇ ಕೊಟ್ಟಿರುತ್ತಾರೆ. ಸದರಿ 2 ದಾಖಲೆಗಳಿಂದ ಸರಿಸುಮಾರು ರೂ.1500/- ದಿಂದ 2000/- ರೂ ಖರ್ಚಾಗಿರಬಹುದು. ಸದರಿ ಖರ್ಚನ್ನು ಮಾನಾಚಾರಿಯವರು ಹಾಕದೇ ಇದ್ದರು ಸಹ ನಿಪಿ-1 ನ್ನು ನಾವೇ ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-1 ನ್ನು ನೊಂದಣಿ ಮಾಡಿಸಿದ ತರುವಾಯ ನಾನು ತೆಗೆದುಕೊಂಡು ಬಂದಿರುತ್ತೇನೆ ಎಂದರೆ ಸರಿ. ಸದರಿ ಮಾನಾಚಾರಿಯವರು ನಿಪಿ-1

ಕ್ಕೆ ಪೆನ್ನಿನಿಂದ ಇಂಗ್ಲೀಷ್ ನಲ್ಲಿ ತನ್ನ ಸಹಿ ಮಾಡಿರುತ್ತಾರೆ. ಶಾರದಮ್ಮನವರು ತನ್ನ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ.

ನಿಪಿ-1ರಲ್ಲಿ ನಮಾದು ಇರುವಂತೆ ಮಾನಾಚಾರಿ ಮತ್ತು ಶಾರದಮ್ಮನವರು ಚಿಕ್ಕಮಂಗಳೂರಿನ ತರೀಕೆರೆಯಲ್ಲಿ ವಾಸವಿದ್ದು, ನಾನು ದಾವಣಗೆರೆಯ ಚನ್ನಗಿರಿ ತಾಃ ಸೋಮ್ಲಾಪುರ ತಾಂಡದಲ್ಲಿ ವಾಸವಾಗಿದ್ದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಸದರಿ ಸೋಮ್ಲಾಪುರ ತಾಂಡದಲ್ಲಿ ಅಂಗನವಾಡಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದು, ನನ್ನ ಗಂಡನ ಊರು ಗಂಡುಗನಹಂಕಲು ಗ್ರಾಮ ಎಂದು ನುಡಿಯುತ್ತಾರೆ. ಸದರಿ ವಿಚಾರಕ್ಕೆ ಸಂಬಂಧಿಸಿದಂತೆ ನಾನು ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಿಪಿ-1 ರ ಹಿಂಭಾಗದ ಪುಟದಲ್ಲಿರುವ ಮಾನಾಚಾರಿ ಮತ್ತು ಶಾರದಮ್ಮ ಎಂದು ನಮೂದು ಇರುವ ಭಾವಚಿತ್ರಗಳಲ್ಲಿ ಸದರಿ ವ್ಯಕ್ತಿಗಳೇ ಮಾನಾಚಾರಿ ಮತ್ತು ಶಾರದಮ್ಮ ಎನ್ನುವುದನ್ನು ತೋರಿಸಲು ನಾನು ಯಾವುದೇ ಗುರುತಿನ ಚೀಟಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಹಾಗಾಗಿ ಸದರಿಯವರು ಮಾನಾಚಾರಿ ಮತ್ತು ಶಾರದಮ್ಮನವರ ಭಾವಚಿತ್ರವಲ್ಲ ಎಂದರೆ ಸರಿಯಲ್ಲ. ಸದರಿಯವರ ಭಾವಚಿತ್ರಗಳನ್ನು ನಿಪಿ-1 ಕ್ಕೆ ಸುಳ್ಳು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಸದರಿ ಮಾನಾಚಾರಿ ಮತ್ತು ಶಾರದಮ್ಮನವರು ತಮ್ಮ ಜೀವಿತಾವಧಿಯಲ್ಲಿ ನನ್ನ ಹೆಸರಿಗೆ ಯಾವತ್ತಿಗೂ ನಿಪಿ-1 ನ್ನ ಬರೆದುಕೊಟ್ಟಿಲ್ಲ ಎಂದರೆ ಸಾಕ್ಷಿ ದಾವಾಸ್ತಿಯನ್ನು ನನ್ನ ಮಾವನವರೇ ಸಾಗು ಮಾಡಿಕೊಂಡು ಬರುತ್ತಿದ್ದು ಅವರು ಮೃತಪಟ್ಟ ತರುವಾಯ ನಾವು ಸಾಗು ಮಾಡಿಕೊಂಡು ಬರುತ್ತಿದ್ದೆವೆ ಎಂದು ನುಡಿಯುತ್ತಾರೆ.

ನಿಪಿ-1 ರಲ್ಲಿ ಹಿಂಭಾಗದ ಪುಟದಲ್ಲಿ ಕ್ರಮ ಸಂಖ್ಯೆ 1 ರಲ್ಲಿ ಶಾರದಮ್ಮ ಎಂದು ನಮೂದು ಇರುವ ಶಾರದಮ್ಮನವರದು ಅಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ದಿಃ16-09-2016 ರ ಶಾರದಮ್ಮನವರ ಚುನಾವಣಾ ಗುರುತಿನ ಚೀಟಿಯನ್ನು ಮತ್ತು ಪಡಿತರ ಚೀಟಿಯನ್ನು ತೋರಿಸಿ ಸದರಿ ನಿಪಿ-1 ರಲ್ಲಿನ ಶಾರದಮ್ಮನವರ ಭಾವಚಿತ್ರಕ್ಕೂ ಮತ್ತು ಸದರಿ ದಾಖಲೆಗಳಲ್ಲಿನ ಶಾರದಮ್ಮನವರ ಭಾವಚಿತ್ರಕ್ಕೂ ವ್ಯತ್ಯಾಸವಿದೆ ಎಂದರೆ ಸರಿಯಲ್ಲ. ನಿಪಿ-1ರಲ್ಲಿ ನಮೂದು ಇರುವ ಮಾನಾಚಾರಿಯವರ ವಿಳಾಸಕ್ಕೂ ಮತ್ತು

ಪಡಿತರ ಚೀಟಿಯಲ್ಲಿರುವ ಮಾನಾಚಾರಿಯರ ವಿಳಾಸಕ್ಕೂ ವ್ಯತ್ಯಾಸವಿದೆ ಎಂದರೆ ನನಗೆ ಗೊತ್ತಿಲ್ಲ. ನಾನು ಪ್ರತಿವಾದಿಯ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಿಪಿ-1 ನ್ನು ಮಾನಾಚಾರಿಯವರು ಬರೆದುಕೊಡದೇ ಇದ್ದರು ಸಹ ನಿಪಿ-1 ನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಸದರಿ ಮಾನಾಚಾರಿಯವರಿಂದ ನಿಪಿ-1ರಂತ ವಿಲ್ ನ್ನು ಮಾಡಿಸಿಕೊಳ್ಳುವ ಯಾವುದೇ ಹಕ್ಕು ನಮಗೆ ಇಲ್ಲ ಎಂದರೆ ಸಾಕ್ಷಿ ವಿಲ್ ಪ್ರಕಾರ ನವಗೆ ಹಕ್ಕು ಇದ್ದು ನನ್ನ ಮಾವ ಜೀವಂತವಿದ್ದ ಕಾಲಕ್ಕೆ ಸದರಿಯರೇ ಸಾಗು ಮಾಡುತ್ತಿದ್ದು ಅವರುಮೃತಪಟ್ಟ ತರುವಾಯ ನಾವೇ ಸಾಗು ಮಾಡುತ್ತಿದ್ದೆವೆ ಎಂದು ನುಡಿಯುತ್ತಾರೆ. ಸದರಿ ಮಾನಾಚಾರಿಯರು ನಮ್ಮ ಜನಾಂಗದವರಲ್ಲದ ಕಾರಣ ಮತ್ತು ನಮ್ಮ ಮತ್ತು ಅವರ ನಡುವೆ ಯಾವುದೇ ಸಂಬಂಧವಿಲ್ಲದ ಕಾರಣ ಸದರಿ ಮಾನಾಚಾರಿ ಮತ್ತು ಶಾರದಮ್ಮನವರು ನಿಪಿ-1 ನ್ನು ನಮಗೆ ಬರೆದುಕೊಡುವ ಪ್ರಶ್ನೆಯೇ ಇಲ್ಲ ಎಂದರೆ ಸರಿಯಲ್ಲ. ನಿಪಿ-1 ನ್ನು ಬಿಟ್ಟರೆ ದಾವಾಸ್ತಿಯ ಮೇಲೆ ನಮ್ಮ ಹಕ್ಕನ್ನು ಸಲ್ಲಿಸಲು ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಹಾಗಾಗಿ ನಿಪಿ-1 ರಂತೆ ನಾವು ದಾವಾಸ್ತಿಗೆ ಯಾವುದೇ ಹಕ್ಕುದಾರರು ಮತ್ತು ಸ್ವಾಧೀನದಾರರು ಅಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.